# 8

# ನಮ್ಮ ದೇವರು ಪ್ರೇರೇಪಿಸುವಾತನು

ದೇವರು ಹೇಗೆ ತನ್ನನ್ನು ಪ್ರಕಟಿಸಿಕೊಂಡನು ಎಂಬುದರ ಮೇಲಿನ ಪಾಠದ ನಂತರ ದೇವರು ಹೇಗೆ ತನ್ನ ಸಂದೇಶವಾಹಕರನ್ನು ಪ್ರೇರೇಪಿಸಿದನು ಎಂಬುದನ್ನು ಯೋಚಿಸಲು ತಿಳಿಗಿಕೊಳ್ಳುವುದು ಆಶ್ಚರ್ಯಗೊಳಿಸಬಾರದು. ಪ್ರೇರೇಪಣೆಯು ಪ್ರಕಟಣೆಯ ವಿಶೇಷ ಸಾಧನವಾಗಿದೆ. ಈ ಪಾಠದಲ್ಲಿ ನಾವು ನಮ್ಮ ದೇವರನ್ನು ಕುರಿತು "ಪ್ರೇರೇಪಿಸುವಾ ತನೆಂಬುದಕ್ಕೆ" ಸಂಬಂಧಿಸಿದ ಎರಡು ಭಿನ್ನವಾದ ವಿಷಯಗಳನ್ನು ಮಾತಾಡುತ್ತೇವೆ. ಇವೆರಡೂ ನಮ್ಮೊಂದಿಗಿನ ಆತನ ಸಂಬಂಧಕ್ಕೆ ಸಂಬಂಧಿಸುತ್ತೇವೆ.

## ನಮ್ಮ ಮೇಲೆ ಆತನ ಪ್ರಭಾವ

ಮೊದಲನೆಯದು, ದೇವರು ಪ್ರೇರಣೆದಾಯಕನಾಗಿದ್ದಾನೆ, ಯಾಕಂದರೆ ಆತನು ಯಾರಾಗಿದ್ದಾನೆ ಮತ್ತು ಆತನು ಏನು ಮಾಡುತ್ತಾನೆ ಎಂಬುದರ ಆ ಪ್ರಭಾವಕ್ಕೆ ಒಪ್ಪಿಸಿ ಕೊಳ್ಳುವವರೆಲ್ಲರ ಮೇಲೆ ಉಲ್ಲಾಸಕರವಾದ, ಜೀವ ಬದುಕಿಸುವ ಹಾಗೂ ಉನ್ನತಿ ಗೇರಿಸುವ ಪ್ರಭಾವ ಬೀರುತ್ತದೆ. ಆತನು ಮಹಾ ಕಾರ್ಯ ಮಾಡಿದ ಮತ್ತು ಮಾಡುತ್ತಿರುವ ನಿಜವಾದ ಮತ್ತು ಜೀವಿಸುವ ದೇವರಾಗಿದ್ದಾನೆ. ಆತನ ಘನತೆಯೂ ಬಲವೂ ಅತನ ಸೃಷ್ಟಿಯಲ್ಲಿ ಮತ್ತು ನಮ್ಮನ್ನು ಪ್ರೋತ್ಸಾಹಿಸುವ ಜೀವದ ವರದಲ್ಲಿ ಕಂಡು ಬರುತ್ತವೆ. ಆತನು ನಮಗೆ ಜನ್ಮ ಕೊಟ್ಟವನು ಎಂದು ಬಲ್ಲವರಾಗಿದ್ದೇವೆ. ಆತನಲ್ಲಿ ನಾವು ನಮ್ಮ ಪ್ರಾರಂಭವನ್ನು ಕಂಡು ಕೊಳ್ಳುತ್ತೇವೆ. ನಮ್ಮ ನಿರ್ದೇಶಕನಂತೆ ನಾವು ಆತನನ್ನು ತಿಳಿದುಕೊಂಡಿದ್ದೇವೆ. ಆತನು ನಮ್ಮ ಜೀವಿತಕ್ಕೆ ನಿರ್ದೇಶನವನ್ನು ಕೊಡುತ್ತಾನೆ ಹಾಗೂ ಇತಿಹಾಸವನ್ನು ಅರ್ಥವುಳ್ಳದ್ದನ್ನಾಗಿ ಮಾಡುತ್ತಾನೆ. ಸಂರಕ್ಷಣೆ ಮಾಡುವಾತನಂತೆ ನಾವು ಆತನನ್ನು ಬಲ್ಲವರಾಗಿದ್ದೇವೆ. ಆತನ ಬಲದಿಂದ ನಮ್ಮ ಜೀವಿತವು ಕಾಪಡಲ್ಪಡುತ್ತದೆ. ಆತನಿಗಾಗಿ ನಾವು ಜೀವಿಸುತ್ತಿರುವದರಿಂದ ವರ್ತಮಾನ ಕಾಲವು ಮಹತ್ವವು ಳ್ಳದ್ದಾಗಿದೆ. ನಮಗಾಗಿ ಭವಿಷ್ಯವು ವಾಗ್ದಾನವನ್ನು ಒಳಗೊಂಡಿದೆ ಎಂಬುದರ ಬಗ್ಗೆ ನಮಗೆ ನಿಶ್ಚಿತತೆಯಿದೆ. ಆತನು ಇಡೀ ಜಗತ್ತನ್ನು ತನ್ನ ಕೈಗಳಲ್ಲಿ ಇಟ್ಟುಕೊಂಡಿದ್ದಾನೆ.

ಸೃಷ್ಟಿಕರ್ತ ಮತ್ತು ಮಾರ್ಗದರ್ಶಿಯಂತೆ ದೇವರು ನಮ್ಮ ತತ್ವಗಳು ನಮ್ಮ ವಾಸ್ತ ವಿಕತೆಯ ಭಾಗವಾಗಿದೆ. ಜೀವಿಸಲು ನಮ್ಮ ಕಾರಣಗಳಲ್ಲಿ ಅವು ತುಂಬಿಕೊಂಡಿವೆ. ನಾವು ದೇವರಲ್ಲಿ ನಂಬಿಕೆಯಿಡುವಾಗ ಜೀವಿತವು ಕೇವಲ ಅಸ್ತಿತ್ವಕ್ಕಿಂತ ಹೆಚ್ಚಾಗುತ್ತದೆ. ದಿನ ನಿತ್ಯದ ಚಟುವಟಿಕೆಗಳು ಜೀವನದ ವಿಶಾಲವಾದ ಅವಕಾಶದಲ್ಲಿ ಒಳಗೊಳ್ಳುತ್ತದೆ. ಲೌಕಿಕ ಕಾರ್ಯಗಳು ಮತ್ತು ಹುರುಳಿಲ್ಲದ ಮೌಲ್ಯಗಳು ಬದಲಾಗಿ ದೇವರ ಜಗತ್ತಿನ ಸೌಂದರ್ಯಕ್ಕಾಗಿ ಸಂತೋಷವು, ಮೆಚ್ಚಿಕೆಯು ಹಾಗೂ ದೇವರ ಜನರೊಂದಿಗೆ ಅನ್ಯೋ ನ್ಯತೆಯ ಸುಖಗಳು ಬರುತ್ತವೆ. ಜೀವನವು ಒಂದು ಸಾಹಸ ಕಾರ್ಯವಾಗಿರುತ್ತದೆ. ಜೀವಿ ಸಲಿಕ್ಕಾಗಿರುವ ಅಭಿರುಚಿಯು ಹೆಚ್ಚಾಗುತ್ತದೆ.

ಇದೊಂದು ಪೊಲಿಯಾನ್ನ್ - ಮಾದರಿಯ ಚಿತ್ರವೆಂದು ನೀವು ಹೇಳುತ್ತೀರಿ? ಅದು ಹಾಗೆ ಇರುವುದೇ ಇಲ್ಲ. ಆತನಿಗೆ ತಮ್ಮನ್ನು ಒಪ್ಪಿಸಿಕೊಳ್ಳುವವರ ಮೇಲೆ ಪ್ರೇರಣಾತ್ಮಕ ದೇವರ ಪ್ರಭಾವವನ್ನು ನಾವು ವಿವರಿಸುತ್ತಿದ್ದೇವೆ. ಮೇಲೆ ಹೇಳಿದ ವಿಷಯವು ಕಲ್ಪನಿಕ ಯೋಜನೆಯಾಗಿದೆಯೆಂದು ತಿಳಿಯಬಾರದು. ದೇವರ ಜನರ ಜೀವಿತಗಳಲ್ಲಿ ಆತನ

ಪ್ರಭಾವವು ಹೀಗೆ ಇರುವುದು ಎಂಬುದನ್ನು ತೋರಿಸುವ ದಾಖಲೆಗಳು ನಮಗೆ ಲಭ್ಯವಿವೆ.

ಅಬ್ರಹಾಮನು ಭವಿಷ್ಯದ ಬಗ್ಗೆ ಹಾಗೂ ದೇವರೊಂದಿಗೆ ತನ್ನ ಸಂಬಂಧದ ಬಗ್ಗೆ ಚಿಂತನೆ ವ್ಯಕ್ತಪಡಿಸಿದಾಗ ಅವನಿಗೆ ದೊಡ್ಡ ಭರವಸೆಯು ಕೊಡಲ್ಪಟ್ಟಿತು. " 'ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವುದು ನಿನ್ನಿಂದಾದರೆ ಲೆಕ್ಕಿಸುಣಿ... ನಿನ್ನ ಸಂತಾನವು ಅಷ್ಟಾಗುವುದು ಅಂದನು.' ಅಬ್ರಾಮನು ಯೆಹೋವನನ್ನು ನಂಬಿದನುಣಿ ಆತನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (ಆದಿಕಾಂಡ 15:5, 6). ವಂಶ ಬೆಳೆಯುವ ವಾಗ್ದಾನದಿಂದ ಮತ್ತು ದೇವರಲ್ಲಿಯ ಅವನ ವಿಶ್ವಾಸವು ತಪ್ಪಿ ಹೋಗ ದಂತೆ ತಿಳುವಳಿಕೆಯಿಂದ ಅವನು ಮೇಲಕ್ಕೆ ಎತ್ತಲ್ಪಟ್ಟನು.

ಯೆಹೋಶುವನ ದಿನಗಳಲ್ಲಿ ಇಸ್ರಾಯೇಲ್ಯರಿಗೆ ಜೀವಿತವು ಶುಭವಾಗಿರಲಿಲ್ಲ, ಅವರು ತಮ್ಮ ಮಹಾ ನಾಯಕನಾದ ಮೋಶೆಯನ್ನು ಕಳೆದು ಕೊಂಡಿದ್ದರು. ಸಮಯಗಳು ಅನಿಶ್ಚಿತವಾದವುಗಳಾಗಿದ್ದವು. ಕಾನಾನನ್ನು ವಶಪಡಿಸಿಕೊಳ್ಳುವುದು ನಡೆದಿತ್ತು, ಬಲಶಾಲಿ ಜನಾಂಗಗಳೊಂದಿಗೆ ರಕ್ತಪಾತದ ಯುದ್ಧಗಳು ಮುಂದೆ ಇದ್ದವು. ಅಂಥ ಒತ್ತಡದ ಸಮಯದಲ್ಲಿ ಯೆಹೋಶುವನು ಜನಾಂಗವನ್ನು ನಡಿಸಲು ಹೇಗೆ ಶಕ್ತನಾಗಿದ್ದನು? ಆಗ ಕರ್ತನು ಯೆಹೋಶುವನಿಗೆ "ನಾನು ಇಂದಿನಿಂದ ನಿನ್ನನ್ನು ಇಸ್ರಾಯೇಲ್ಯರೆಲ್ಲರ ಮುಂದೆ ಘನಪಡಿಸುವೆನುಣಿ ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡವೂ ಇರುವೆ ನೆಂಬುದು ಅವರಿಗೂ ಗೊತ್ತಾಗುವುದು" (ಯೆಹೋಶುವ 3:7). ಯೆಹೋಶುವನು ತನ್ನ ದೇವರಿಂದ ಬಲವಾದ ಪ್ರೋತ್ಸಾಹವನ್ನು ಹೊಂದಿಕೊಂಡನು. ಕಠಿಣವಾದ ಸಮಯ ಗಳಲ್ಲಿಯೂ ಸಹ ದೇವರು ನಡಿಸುತ್ತಿರುವನೆಂಬ ದೃಢನಂಬಿಕೆ ನಮ್ಮಲ್ಲಿರುವಾಗ ಆತಂಕ ಗಳನ್ನು ಅವಕಾಶಗಳಂತೆ ನೋಡುವ ಸಾಧ್ಯತೆಯಿರುವುದು.

ಹನ್ನಳು ಎಫ್ರಾಯಿಮಿನ ತಪ್ಪಲು ಪ್ರದೇಶದ ಮನುಷ್ಯನಾದ ಎಲ್ಕಾನನ ಹೆಂಡತಿಯಾಗಿದ್ದಳು. ಅವರು ಮದುವೆಯಾಗಿ ಹಲವಾರು ವರ್ಷಗಳಾಗಿದ್ದವು. ಆಕೆಯ ಗಂಡನು ಆಕೆಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಹಾಗಿದ್ದರೂ, ಆಕೆಗೆ ಮಕ್ಕಳಿಲ್ಲದ್ದರಿಂದ ಆಕೆ ದು ಖಿತಳಾಗಿದ್ದಳು. ಕ್ರಿಸ್ತಪೂರ್ವ ಎರಡನೆಯ ಮಿಲ್ಲೆನ್ನಿಯಮ್‌ದಲ್ಲಿ ಪುರಾತನ ಪೌರಸ್ತ್ಯ ದೇಶಗಳಲ್ಲಿ ವಾಸಿಸುತ್ತಿದ್ದ ಮಕ್ಕಳಿಲ್ಲದ ಸ್ತ್ರೀಯರಿಗಾಗಿ ಜೀವಿತವು ಗಂಡಾಂತರಕಾರಿಯಾದದ್ದಾಗಿತ್ತು, ವಿವಾಹಿತ ಬಂಜೆಯರಾದ ಸ್ತ್ರೀಯರು ಭಾರವು ಳ್ಳವರಾಗಿದ್ದರು. ಹನ್ನಳ ಸ್ಥಿತಿಯೂ ಹಾಗೆಯೇ ಇತ್ತು. ಆದುದರಿಂದ ಮಗುವಿಗಾಗಿ ಬಲವಾದ ಪ್ರಾರ್ಥನೆ ಮಾಡಿದಳು. ಆಕೆಯ ಪ್ರಾರ್ಥನೆಗೆ ಉತ್ತರ ದೊರೆಯಿತು. ಮಹಾ ಆನಂದದಲ್ಲಿ ಆಕೆ ದೇವರಿಗೆ ಕೃತಜ್ಞತೆ ಪ್ರದರ್ಶಿಸುವ ಹೆಸರನ್ನು ಆ ಮಗುವಿಗೆ ಕೊಟ್ಟಳು. ಅವನಿಗೆ ಸಮುವೇಲ ಎಂದು ಹೆಸರಿಟ್ಟಳು.[1]

> ಆಗ ಹನ್ನಳು ಪ್ರಾರ್ಥನೆ ಮಾಡಿ ಹೀಗೆ ಹೇಳಿದಳು, "ನನ್ನ ಹೃದಯವು ಕರ್ತನಲ್ಲಿ ಉಲ್ಲಾಸಿಸುತ್ತದೆಣಿ ನನ್ನ ಕೊಂಬು ಕರ್ತನಿಂದ ಎತ್ತಲ್ಪಟ್ಟಿದೆ. ಶತ್ರುಗಳ ಮುಂದೆ ನನ್ನ ಬಾಯಿತೆರೆದಿರುವುದು. ನಿನ್ನ ರಕ್ಷಣೆಯಲ್ಲಿ ಆನಂದಿಸುತ್ತೇನೆಣಿ ಕರ್ತನಂಥ ಪರಿಶುದ್ಧನು ಇಲ್ಲವೇ ಇಲ್ಲಣಿ ನಿನ್ನ ಹೊರತು ದೇವರು ಯಾರು? ನಮ್ಮ ದೇವರೇ ಅಸಮಾನವಾದ ಆಶ್ರಯದುರ್ಗವು" (1 ಸಮುವೇಲ 2:1, 2).

ಒಂದು ಸಾವಿರ ವರ್ಷಗಳನಂತರ, ನಾವು ಇನ್ನೊಬ್ಬ ಸ್ತ್ರೀಯ ಬಗ್ಗೆ ಓದುತ್ತೇವೆ. ಆಕೆ ತನಗಾಗಿದ್ದ ಸಮಾಚರಕ್ಕಾಗಿ ದೇವರನ್ನು ಕೊಂಡಾಡಿದಳು. ಪರಿಶುದ್ಧಾತ್ಮನಿಂದ ಗರ್ಭಧರಿಸಲ್ಪಡುವ ಆಶೀರ್ವಾದವನ್ನು ಆತನು ಕೊಡಲಿಕ್ಕಿದ್ದನು. ಹೀಗೆ ಜನಿಸುವ ಮಗುವಿನ ಹೆಸರು ಯೇಸು ಎಂದಾಗಿರ ಬೇಕಾಗಿತ್ತು (ಮತ್ತಾಯ 1:20, 21). ಆಕೆಯ

ಜೀವನದಲ್ಲಿ ಎಂಥಾ ಬದಲಾವಣೆ! ಎಂಥಾ ಉದ್ದೇಶ, ಸೇವಾ ಕಾರ್ಯ ಹಾಗೂ ಅವಕಾಶ! ಆಕೆಯ ಕೃತಜ್ಞತೆ ಮತ್ತು ಆನಂದವು ಸಂಗೀತದಲ್ಲಿ ಪ್ರಕಟಿಸಲ್ಪಟ್ಟಿತು. "ನನ್ನ ಪ್ರಾಣವು ಕರ್ತನನ್ನು ಕೊಂಡಾಡುತ್ತದೆ. ನನ್ನ ಆತ್ಮವು ನನ್ನ ರಕ್ಷಕನಾದ ದೇವರ ವಿಷಯದಲ್ಲಿ ಉಲ್ಲಾಸಗೊಂಡಿದೆ ... ಶಕ್ತನಾಗಿರುವಾತನು ನನಗೆ ದೊಡ್ಡ ಉಪಕಾರ ಮಾಡಿದ್ದಾನೆ; ಆತನ ನಾಮವು ಪರಿಶುದ್ಧವಾದದ್ದು" (ಲೂಕ 1:46-49).

ದೇವರ ಪ್ರಭಾವದ ಕೆಳಗೆ ಜೀವಿಸುವಾಗ ಒಬ್ಬನು ಹೇಗೆ ಭರವಸೆಯುಳ್ಳವನೂ ಕಾರ್ಯಸಾಧಿಸುವವನೂ ಆಗಿರಬಹುದು ಎಂಬುದಕ್ಕೆ ಅತೀ ದೊಡ್ಡ ಉದಾಹರಣೆಗಳಲ್ಲಿ ಪೌಲನು ಒಬ್ಬನು. ಅಪೊಸ್ತಲನಾಗಿ ಅವನ ಜೀವಿತವು ಗಲಭೆಗಳಿಂದಲೂ ಒತ್ತಡಗಳಿಂದಲೂ ತುಂಬಿಕೊಂಡಿತ್ತು. ಪೌಲನು ಅನೇಕ ಕಷ್ಟಗಳನ್ನು ಸಹಿಸಿಕೊಂಡನು, ಸಾವಿರಾರು ಮೈಲುಗಳ ವರೆಗೆ ಪ್ರಯಾಣ ಮಾಡಿದನು. ಅವನು ದೇವರಿಗೆ ನಿಷ್ಠೆಯುಳ್ಳವನಾಗಿದ್ದುದರಿಂದ ವರ್ಷಗಳನ್ನು ಸೆರೆಮನೆಯಲ್ಲಿ ಕಳೆದನು. ಅವನು ಭರವಸೆ ಉಳ್ಳವನಾಗಿದ್ದನೋ? "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13) ಎಂದು ಅವನು ಹೇಳಿದನು. ಅವನಿಗೆ ನಂಬಿಕೆ ಇತ್ತೋ? "ಕಡೇ ಮಾತೇನಂದರೆ, ನನ್ನ ಸಹೋದರರೇ, ಕರ್ತನಲ್ಲಿ ಸಂತೋಷಪಡಿರಿ" (ಫಿಲಿಪ್ಪಿ 3:1ಎ) ಅವನು ತೃಪ್ತನಾಗಿದ್ದನೋ? "ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೇನೆ" (ಫಿಲಿಪ್ಪಿ 4:11ಬಿ) ಎಂದು ಅವನು ಹೇಳಿದನು. ತನ್ನ ಜೀವನದ ಬಗ್ಗೆ ಅವನ ಮೌಲ್ಯಮಾಪನ ಹೇಗಿತ್ತು? ಅವನು ಹೀಗೆ ಹೇಳಿದ್ದಾನೆ,

> ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ; ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು (2 ತಿಮೊಥೆ 4:7, 8).

ಬೈಬಲಿನಿಂದ ಉದಾಹರಣೆಗಳು ಅನೇಕವಿದೆ. ಉದಾಹರಿಸಲ್ಪಟ್ಟ ಸತ್ಯವು ಒಂದೇಯಾಗಿರುತ್ತದೆ. ಯುಗಗಳಲ್ಲಿ ಅಸಂಖ್ಯಾತ ಮಿತಿಯ ಜನರು, ಈ ಮೊದಲು ದೇವರನ್ನು ಹಿಂಬಾಲಿಸಿದವರು ಅನುಭವಿಸಿದ್ದನ್ನು ಕಂಡುಕೊಂಡಿದ್ದಾರೆ. ದೇವರು ನಿಶ್ಚಯವಾಗಿಯು ಮಹಾ ಪ್ರೋತ್ಸಾಹದಾಯಕನಾಗಿದ್ದಾನೆ. ಆತನು ನಮ್ಮನ್ನು ಮೇಲಕ್ಕೆ ಎತ್ತಿದ್ದಾನೆ. ಆತನು ನಮ್ಮನ್ನು ನಡಿಸುತ್ತಾನೆ. ಆತನು ಜೀವನಕ್ಕೆ ಅರ್ಥವನ್ನೂ ಮಹತ್ವವನ್ನೂ ಕೊಡುತ್ತಾನೆ. ನಿತ್ಯ ಜೀವಕ್ಕೆ ನಮ್ಮನ್ನು ಕರೆಯುತ್ತಾನೆ. ಏನೇ ಆದರೂ ನಮ್ಮ ದೇವರು ಪ್ರೇರಣಾತ್ಮನಾಗಿದ್ದಾನೆಂಬುದರಲ್ಲಿ ಪ್ರಶ್ನೆಯೇ ಇರುವದಿಲ್ಲ.

## ಬೈಬಲಿನ ದೈವ ಪ್ರೇರಣೆ

ದೇವರು ತನ್ನ ಪ್ರೇರಣೆಯ ಸ್ವಭಾವವನ್ನು ಎರಡನೆಯ ರೀತಿಯಲ್ಲಿ - ಅವುಗಳ ಅವಲಂಭನೆಯೆ ತಳಹದಿಯಾಗಿರುವ ಪರಿಶುದ್ಧ ಬರಹಗಳ ತನ್ನ ಪ್ರೇರಣೆಯಲ್ಲಿ ಪ್ರಕಟಿಸುತ್ತವೆ. ಅಬ್ರಹಾಮ, ಯೆಹೋಶುವ, ಎಲೀಯ, ಮರಿಯಳು, ಸ್ತೆಫನ ಮತ್ತು ಇನ್ನೂ ಇತರ ಅನೇಕರು ದೇವರಲ್ಲಿ ನಂಬಿಕೆಯಿದ್ದ ಆತನ ಅಪ್ಪಣೆಯನ್ನು ಕೈಕೊಂಡದ್ದರಿಂದ ಜಯಪ್ರದ ಜೀವನ ಜೀವಿಸಿದರು. ಪರಿಶುದ್ಧ ಬರಹಗಳು ಸತ್ಯವಾದವುಗಳಾಗಿವೆ ಎಂಬ

ಭರವಸೆ ಇಲ್ಲದಿದ್ದರೆ ಇವು "ನಿಜವಾದ ಕಥೆಗಳು" ಎಂದು ನಾವು ತಿಳಿಯುತ್ತಿರಲಿಲ್ಲ. ಆ ಭರವಸೆ ನಮಗಿರುತ್ತದೆ.

ಬೈಬಲಿನ ಪುರಾತನ ವಸ್ತು ಶಾಸ್ತ್ರ ಮತ್ತು ಬೈಬಲಿನ ಸಮಯದೊಂದಿಗೆ ಸಮಕಾಲಿನ ಪುರಾತನ ಬರಹಗಳಂಥ ಕ್ರೈಸ್ತ ಪುರಾವೆಗಳ ವಿಶಾಲವಾದ ಕ್ಷೇತ್ರವು ಬೈಬಲಿನ ಚರಿತ್ರೆಯ ಸರ್ವ ಸಮಸ್ತ ಸಾಮರ್ಥ್ಯವನ್ನು ಸ್ಥಾಪಿಸುತ್ತ ಬಹುಕಾಲದಿಂದ ಇರುತ್ತದೆ.[2] ಈ ಮೂಲ ಗಳನ್ನು ಅಧ್ಯಯನ ಮಾಡುವುದು ಬೈಬಲಿನ ಬಗ್ಗೆ ಉನ್ನತವಾದ ದೃಷ್ಟಿಕೋನ ಒದಗಿಸುವಲ್ಲಿ ಲಾಭದಾಯಕವಾದದ್ದಾಗಿದೆ. ಪ್ರಗತಿಯಾಗಿರುವದಕ್ಕಾಗಿ ನಾವು ಕೃತಜ್ಞತೆಯುಳ್ಳವರಾಗಿ ಇರುವೆವು. ಈ ಪುರಾವೆಗಳು ಬೈಬಲಿನಲ್ಲಿ ನಮ್ಮ ಭರವಸೆಯನ್ನು ಹೆಚ್ಚಿಸುವಾಗ ಅವುಗಳ ಐತಿಹಾಸಿಕ ಸೃಷ್ಟಿಯ ಬಗ್ಗೆ ನಮ್ಮ ತಿಳುವಳಿಕೆಯನ್ನು ಎತ್ತಿ ಹಿಡಿಯುತ್ತದೆ. ಬೈಬಲು ತಾನು ಏನಾಗಿದ್ದೇನೆಂದು ಹೇಳುವಂಥದ್ದಕ್ಕೆ ಅಂದರೆ ದೇವರ ಪ್ರೇರಿತ ವಾಕ್ಯವೆಂದು ಹೇಳಿಕೊಳ್ಳು ವದಕ್ಕೆ ಸರಿಯಾದದ್ದಾಗಿರತಕ್ಕದ್ದು. "*ದೈವ ಪ್ರೇರಿತವಾದ ಪ್ರತಿಯೊಂದು ಪರಿಶುದ್ಧ ಬರಹವು* ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತ ವಾಗಿದೆ" (2 ತಿಮೊಥೆ 3:16) ಎಂದು ನಾವು ಓದುತ್ತೇವೆ.

ಗ್ರೀಕಿನಲ್ಲಿ *(pase graphe theopneustos),* "ಎಲ್ಲಾ ಪರಿಶುದ್ಧಬರಹವು ದೈವ ಪ್ರೇರಿ ತವಾದದ್ದು" ಎಂಬ ಮಾತನ್ನು ನೋಡುವಾಗ ವಿವಿಧ ಭಾಷಾಂತರಗಳಿಂದ ಸಂದೇಹಾ ರ್ಥವುಂಟಾಗಿದೆ.[3] ದೇವರು ಉಸುರಿದನು ಎಂಬರ್ಥವುಳ್ಳ *theopneustos* ಎಂಬ ಗ್ರೀಕ್ ಪದವು ಲ್ಯಾಟಿನ್ *divinitus inspirata* ಮುಖಾಂತರ ಭಾಷಾಂತರಿಸಲ್ಪಟ್ಟಿದ್ದು "ದೇವರಿಂದ ಪ್ರೇರಿತವಾದದ್ದು" ಎಂಬುದಾಗಿದ್ದರಿಂದ ಇದಾಗಿದೆ. "ದೇವರು ಉಸಿರು ಬಿಡುವುದು" ಎಂಬುವುದು "ದೇವರು ಉಸಿರು ತೆಗೆದು ಕೊಳ್ಳುವುದು" ಎಂಬರ್ಥ ಕೊಡುವಂತೆ ಬದಲಾಗಿದೆ. 2 ತಿಮೊಥೆ 3:16ರಲ್ಲಿ ಪೌಲನು ಪರಿಶುದ್ಧ ಬರಹಗಳು ದೇವರ ದೈವಿಕ ಶಕ್ತಿಯ ಪರಿಣಾಮಗಳಾಗಿವೆ ಹಾಗೂ ಹೇಳಲ್ಪಟ್ಟ ಮಾರ್ಗಗಳಲ್ಲಿ ನಮಗೆ ಲಾಭದಾಯಕವಾದವುಗಳಾಗಿವೆ ಎಂದು ಒತ್ತಿ ಹೇಳಿದ್ದಾನೆ. ಆತನು "ಶ್ವಾಸ ಉಸುರುವುದರಿಂದ" ದೇವರ ಸೃಷ್ಟಿಸುವ ಶಕ್ತಿಯ ಮುಖ್ಯ ಪ್ರಸ್ತಾಪವು ಬೈಬಲಿನಲ್ಲಿ ಬೇರೆ ಕಡೆಯಲ್ಲಿ ಕಂಡುಬರುತ್ತದೆ. ದೇವರು ಮಾನವ ಸೃಷ್ಟಿಯನ್ನು ಮಾಡಿದ್ದನ್ನು ಅಧ್ಯಯನ ಮಾಡಿದ್ದರಲ್ಲಿ ಇದು ಪ್ರದರ್ಶಿಸಲ್ಪಟ್ಟದ್ದನ್ನು ನೋಡಿದ್ದೇವೆ. ಕೀರ್ತನೆ 33:6ರಲ್ಲಿ ಆತನ ಸೃಷ್ಟಿಯ ಚಿತ್ರವು ವಿವರಿಸಲ್ಪಟ್ಟದ್ದರಲ್ಲಿ ನೋಡುತ್ತೇವೆ. "ಕರ್ತನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತುಣಿ ಅದರಲ್ಲಿ ಇರುವದೆಲ್ಲವೂ ಆತನ ಶ್ವಾಸದಿಂದ ನಿರ್ಮಿತವಾ ಯಿತು." ಹೀಗೆ ದೇವರು ತನ್ನ ಉದ್ದೇಶವನ್ನು ನೆರವೇರಿಸುವದಕ್ಕಾಗಿ ತನ್ನ ಬಲವನ್ನು ಸುರಿಸುವದನ್ನು ವಿವರಿಸುವ ಮಾರ್ಗದಂತೆ "ದೇವರ ಶ್ವಾಸ ಊದುವಿಕೆಯನ್ನು" ನಾವು ನೋಡುತ್ತೇವೆ. ಆತನ ಉದ್ದೇಶವು ಜೀವಕೊಡುವದಾಗಲಿ, ವಿಶ್ವಾಸವನ್ನು ಹುಟ್ಟಿಸುವುದಾಗಲಿ ಇಲ್ಲವೇ ತನ್ನ ವಾಕ್ಯವನ್ನು ಬರೆಯುವದಾಗಲಿ ಇದೇ ಆಗಿದೆ. *"ದೇವರ ಶ್ವಾಸದಿಂದ" ಸೃಷ್ಟಿಯು ಬಂದಂತೆ ಹಾಗೆಯೇ ಬೈಬಲು ಆತನ* "ಶ್ವಾಸದಿಂದ" ಬಂದಿತು. ಎರಡೂ ಆತನ ಬಲದ ಮತ್ತು ಕಾರ್ಯದ ಉತ್ಪಾದನೆಗಳಾಗಿವೆ.

ಬೈಬಲಿನ *ಐತಿಹಾಸಿಕ* ಸ್ಪಷ್ಟತೆಯನ್ನು ತೋರಿಸುವ ಕ್ರೈಸ್ತ ಪುರಾವೆಗಳಿಗಾಗಿ ನಾವು ಕೃತಜ್ಞತೆ ಸಲ್ಲಿಸುವಾಗ, ದೇವರ ವಾಕ್ಯಕ್ಕಾಗಿರುವ ನಮ್ಮ ಮೆಚ್ಚಿಕೆ ಮತ್ತು ಪ್ರೀತಿಯು ಹೆಚ್ಚಾಗಿ ವಿಶ್ವಾಸದ ಸಂಗತಿಯಾಗಿದೆ. *ಲಿಖಿತ* ದೇವರ ವಾಕ್ಯದ ಕಡೆಗೆ ನಾವು ತಿರುಗಿಕೊಳ್ಳುವಾಗ ಇಲ್ಲಿಂದಲೇ ನಮ್ಮ ವಿಶ್ವಾಸ ಹುಟ್ಟಿತೆಂದು ಕಂಡು ಕೊಳ್ಳು ತ್ತೇವೆ - ಪ್ರಾಚೀನ ವಸ್ತು ಶಾಸ್ತ್ರದಿಂದ ಇಲ್ಲವೇ ಬೇರೆಯಾವುದೇ ವಿಧಾನದಿಂದ ಅಲ್ಲ (ರೋಮಾಪುರ 10:15-17). ಲಿಖಿತ ದೇವರ ವಾಕ್ಯದ ಬಲವು ವಿಶ್ವಾಸವನ್ನು

ಹುಟ್ಟಿಸುವ, ವಿಶ್ವಾಸವನ್ನು-ರಕ್ಷಿಸುವ ಬಲವಾಗಿದೆ. ಬೈಬಲಿನಲ್ಲಿ ಬೇರೆ ಕಡೆಯಲ್ಲಿ ನಾವು ಅನುಭವಿಸುವ ಬೇರೆ ಯಾವುದಕ್ಕಿಂತ ಹೆಚ್ಚು ಅಗೋಚರವಾದ ಬಲವನ್ನು ಕಂಡುಕೊಳ್ಳುತ್ತೇವೆ. ಬಿರುಗಾಳಿಯನ್ನು ಎಬ್ಬಿಸುವ, ಭೂಕಂಪಗಳ, ಸಮುದ್ರದ ತೆರೆಗಳ, ಅರಣ್ಯ ಬೆಂಕಿಗಳ, ಇತ್ಯಾದಿಗಳ ಬಲವನ್ನು ನಾವು ತಿಳಿದು ಕೊಂಡಿರುವೆವು. ಪರಿಶುದ್ಧ ಬರಹಗಳಲ್ಲಿ ಮಾನವ ಜೀವಿತವನ್ನು ಬದಲಾಯಿಸುವ, ರಕ್ಷಿಸುವ ಬಲವನ್ನು ಕಂಡುಕೊಳ್ಳುತ್ತೇವೆ. ಈ ಮೂಲಕ ಮೇಲೆ ಹೇಳಲ್ಪಟ್ಟ ನಾಶನದ ಶಕ್ತಿಗಳಿಗಿಂತ, ಪಾಪದ ನಾಶನದ ಬಲವು ಹಾಗೂ ನಾವು ಜನನದಿಂದ ಎಲ್ಲರೂ ಎದುರಿಸುವ ಮರಣಕ್ಕಿಂತಲೂ ಹೆಚ್ಚು ಬಲವುಳ್ಳದ್ದಾಗಿರುತ್ತದೆ.

ಈ ಬಲವು ನಮ್ಮನ್ನು ಬಿಡುಗಡೆ ಮಾಡುವುದು (ಯೋಹಾನ 8:32). "ನಿನ್ನ ವಾಕ್ಯವು ನನ್ನ ಪಾದಕ್ಕೆ ದೀಪವೂ ಹಾಗೂ ನನ್ನ ಮಾರ್ಗಕ್ಕೆ ಬೆಳಕು ಆಗಿದೆ" (ಕೀರ್ತನೆ 119:105) ಎಂದು ಕೀರ್ತನೆಗಾರನು ಹೇಳುತ್ತಾನೆ. "ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು: ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು" (ಯೋಹಾನ 1:14) ಎಂದು ಅಪೊಸ್ತಲರ ಯೋಹಾನನು ಯೇಸುವಿನ ಬಗ್ಗೆ ಹೇಳಿದ್ದಾನೆ. ಬೈಬಲಿನಲ್ಲಿ ಆತನ ವಾಕ್ಯವು ವ್ಯಕ್ತೀಕರಿಸಲ್ಪಟ್ಟದ್ದನ್ನು ಕಂಡುಕೊಳ್ಳುತ್ತೇವೆ. ನಾವು ಆತನ ಮುಖಾಂತರ ಮನೆಗೆ ಹಿಂದಿರುಗಿ ನಡಿಸುವವರಾಗುವಂತೆ ನಾವು ಆತನನ್ನು ಕಂಡುಕೊಳ್ಳುತ್ತೇವೆ (ಯೋಹಾನ 14:1-6). ಪ್ರೇರಿತ ಜನರಿಂದ ಬರೆಯಲ್ಪಟ್ಟ ಬೈಬಲಿನಲ್ಲಿ, ನಾವು ತಿಳಿದುಕೊಂಡ ಅತೀ ಹೆಚ್ಚಿನ ಪ್ರೇರೇಪಣೆ ಕೊಡುವ ವ್ಯಕ್ತಿಯನ್ನು ಸಂದರ್ಶಿಸುತ್ತೇವೆ. "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾನ 10:10ಬಿ) ಎಂದು ಆತನು ಹೇಳಿದನು. ಒಂದಕ್ಕಿಂತಲೂ ಹೆಚ್ಚು ರೀತಿಯಲ್ಲಿ ನಮ್ಮ ದೇವರು ಪ್ರೇರೇಪಿಸುವಾತನಾಗಿದ್ದಾನೆ.

---

ಟಿಪ್ಪಣಿಗಳು

[1]*Shmu'el* ಅಂದರೆ "El [ದೇವರ] ಹೆಸರು" (Francis Brown, S. R. Driver, and Charles A. Briggs, *A Hebrew and English Lexicon of the Old Testament* [Oxford: Clarendon, 1958], 1028). [2]"… ಬೈಬಲ್ ಹಾಗೂ ಅದರ ಸಂದೇಶವು ಭೂತಕಾಲಕ್ಕೆ ಮತ್ತು ಸುತ್ತಲಿನ ಸಂಸ್ಕೃತಿಗಳಿಗೆ ಸಂಬಂಧಿಸಿದೇ ತಾನೇ ಬಂದಿರುವದೆಂದು ಒತ್ತಿ ಹೇಳುವುದು ಬೈಬಲಿನ ವಿಚಾರದ ಮತ್ತು ಬೈಬಲ್ ಜಗತ್ತಿನ ಅಪಾರವಾದ ಸಮೃದ್ಧಿಯನ್ನು ಕಂಡುಕೊಳ್ಳುವಲ್ಲಿ ಸೋತು ಹೋಗುವಂಥದ್ದಾಗುತ್ತದೆ. ಇದಲ್ಲದೇ, ಬೈಬಲು ಹೇಳುವಂಥದ್ದಕ್ಕೆ ತಪ್ಪು ಅರ್ಥ ಮಾಡಿಕೊಳ್ಳುವ ಗಂಭೀರವಾದ ಗಂಡಾಂತರದಲ್ಲಿರುತ್ತದೆ. ನಿತ್ಯವಾದ ದೇವರ ಸಮಯಾತೀತವಾದ ಸಂದೇಶವು ಸಮಯದಲ್ಲಿ ಮನುಷ್ಯನಿಗೆ ಹೇಳಲ್ಪಟ್ಟಿದೆ …" (Harry Thomas Frank, *Bible Archaeology and Faith* [Nashville: Abingdon, 1976], 12). [3]The KJV, RSV, NAB, NEB, NIV ಹೋಲಿಕೆಗಾಗಿ ಅವಲೋಕಿಸು.